Edited by Foxit Reader
Copyright(C) by Foxit Software Company,2005-2007
For Evaluation Only.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-27

ಸಂ:ಕರಾಸಾ:ಕೇಕ:ಸಂ:ವಾ:ಸಿ2:1567/4975 :2016-17 ದಿನಾಂಕ:30.11.2016

# ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:777/2016

ವಿಷಯ: ಅಂಧರ ಉಚಿತ ಬಸ್ ಪಾಸ್ ವಿತರಣೆ ಕುರಿತು.

ಉಲ್ಲೇಖ:
1. ಸಾಮಾನ್ಯ ಸ್ಥಾಯಿ ಆದೇಶ ಸಂ. 340 ದಿನಾಂಕ 15.01.1986.
2. ಸಾಮಾನ್ಯ ಸ್ಥಾಯಿ ಆದೇಶ ಸಂ. 399 ದಿನಾಂಕ 08.03.1994.
3. ಸಾಮಾನ್ಯ ಸ್ಥಾಯಿ ಆದೇಶ ಸಂ. 430 ದಿನಾಂಕ 06.06.1997.
4. ಸುತ್ತೋಲೆ ಸಂ. 994/08-09 ದಿನಾಂಕ 29.05.2009.
5. ಸಾಮಾನ್ಯ ಸ್ಥಾಯಿ ಆದೇಶ ಸಂ. 641 ದಿನಾಂಕ 12.03.2010.
6. ಸಾಮಾನ್ಯ ಸ್ಥಾಯಿ ಆದೇಶ ಸಂ. 1085 ದಿನಾಂಕ 11.07.2011.
7. ಸಾಮಾನ್ಯ ಸ್ಥಾಯಿ ಆದೇಶ ಸಂ. 739 ದಿನಾಂಕ 11.11.2013.
8. ಸರ್ಕಾರದ ಆದೇಶ ಸಂ: ಸಾರಿಇ 195 ಸಾಸಂಇ 2014 ದಿನಾಂಕ: 23.07.2016.

*********

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ ಬಹಳ ಹಿಂದಿನಿಂದಲೂ ಅಂಧರಿಗೆ ಉಚಿತ ಬಸ್ ಪಾಸುಗಳನ್ನು ವಿತರಿಸುತ್ತಾ ಬಂದಿರುತ್ತದೆ. ಈ ಸಂಬಂಧ ಉಲ್ಲೇಖಿತ 1 ರಿಂದ 7 ರವರೆಗಿನ ಸಾಮಾನ್ಯ ಸ್ಥಾಯಿ ಆದೇಶ ಹಾಗೂ ಸುತ್ತೋಲೆಗಳಲ್ಲಿ ಅಂಧರ ಉಚಿತ ಬಸ್ ಪಾಸ್ ವಿತರಣೆ, ವಿಸ್ತರಿಸಲಾಗಿರುವ ಪ್ರಯಾಣ ಸೌಲಭ್ಯ, ಪಾಸ್ ವಿತರಣೆಯಲ್ಲಿ ಅನುಸರಿಸಬೇಕಾದ ಕ್ರಮಗಳು, ಅಂಧ ಪ್ರಯಾಣಿಕರಿಗೆ ಮೀಸಲಿಡುವ ಆಸನಗಳ ಸೌಲಭ್ಯ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ನೀಡಲಾಗಿದೆ. ಪ್ರಸ್ತುತ, ನ್ಯಾಷನಲ್ ಫೆಡರೇಷನ್ ಆಫ್ ಬ್ಲೈಂಡ್‌ರವರು ಅಂಧ ನಾಗರೀಕರ ಬಸ್ ಪಾಸ್ ವಿತರಣೆಗೆ ಸಂಬಂಧಿಸಿದಂತೆ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದು, ಕೆಲವು ಬೇಡಿಕೆಗಳಿಗೆ ಸ್ಪಂದಿಸಿದ ಸರ್ಕಾರವು ಉಲ್ಲೇಖ-8 ರಲ್ಲಿ ಈ ಬಗ್ಗೆ ಆದೇಶ ಹೊರಡಿಸಿರುತ್ತದೆ.

ಅಂಧರಿಗೆ ಉಚಿತ ಪಾಸುಗಳನ್ನು ವಿತರಿಸುವಾಗ ಅನುಸರಿಸಬೇಕಾದ ಕ್ರಮಗಳು ಹಾಗೂ ಇತರೆ ವಿಷಯಗಳ ಬಗ್ಗೆ ಹಲವಾರು ಸಾಮಾನ್ಯ ಸ್ಥಾಯಿ ಆದೇಶ/ಸುತ್ತೋಲೆಗಳಿದ್ದು, ಅವುಗಳನ್ನು ಕ್ರೋಢೀಕರಿಸಿ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

## I. ಅಂಧರ ಉಚಿತ ಪಾಸು ಪಡೆಯಲು ಪೂರೈಸಬೇಕಿರುವ ನಿಬಂಧನೆಗಳು :

1. ಕರ್ನಾಟಕ ರಾಜ್ಯದ ವಾಸಿಗಳು/ಫಲಾನುಭವಿಗಳು ಮಾತ್ರ ಅಂಧರ ಉಚಿತ ಬಸ್ ಪಾಸ್‌ಗಳನ್ನು ಪಡೆಯಲು ಅರ್ಹರಿರುತ್ತಾರೆ.



Traffic Chandru

2. ಅಂಧರ ಉಚಿತ ಪಾಸುಗಳನ್ನು ಪೂರ್ಣ ಅಂಧರಿಗೆ (Totally Blind) ಮಾತ್ರ ವಿತರಿಸುವುದು. ಭಾಗಶಃ ಅಂಧರು (Squint eyes) ಉಚಿತ ಬಸ್ ಪಾಸ್‌ಗೆ ಅರ್ಹರಲ್ಲ.
3. ಅಂಧ ಫಲಾನುಭವಿಗಳು ತಮ್ಮ ವಾಸ ಸ್ಥಳವಿರುವ ಜಿಲ್ಲಾ ವ್ಯಾಪ್ತಿಯ ನಿಗಮದ ವಿಭಾಗೀಯ ಕಛೇರಿಗಳಲ್ಲಿ ಪಾಸ್ ಪಡೆಯಲು ಅರ್ಜಿ ಸಲ್ಲಿಸಿ, ಪಾಸುಗಳನ್ನು ಪಡೆಯಬೇಕು.
4. ಅಂಧತ್ವ ಪ್ರಮಾಣಪತ್ರ ಸಲ್ಲಿಕೆಯು ಕಡ್ಡಾಯವಿದ್ದು, ಸದರಿ ಪ್ರಮಾಣಪತ್ರವನ್ನು ಯಾರಿಂದ ಸಹಿಗೊಳಿಸಿ ಸಲ್ಲಿಸಬೇಕು ಎಂಬುದರ ಬಗ್ಗೆ ಸರ್ಕಾರವು ಆಗಿಂದಾಗ್ಗೆ ನಿಯಮಗಳನ್ನು ಪರಿಷ್ಕರಿಸಿರುತ್ತದೆ. ಹಾಲಿ ಸರ್ಕಾರದ ಆದೇಶ ಸಂ.ಮಮಇ 65 ಪಿಹೆಚ್‌ಪಿ 2010, ದಿನಾಂಕ 21.09.2011 ರಲ್ಲಿ ಪೂರ್ಣ ಅಂಧತ್ವವನ್ನು ಧೃಡೀಕರಿಸಿ ಪ್ರಮಾಣ ಪತ್ರವನ್ನು ನೀಡಲು ಕೆಳಕಂಡ ವೈದ್ಯಕೀಯ ಪ್ರಾಧಿಕಾರಗಳನ್ನು ಸರ್ಕಾರವು ರಚಿಸಿರುತ್ತದೆ.

**(ಅ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯಕೀಯ ಪ್ರಾಧಿಕಾರ.**

**(ಆ) ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ.**

| | | |
|---|---|---|
| 1 | ಆಡಳಿತ ವೈದ್ಯಾಧಿಕಾರಿಗಳು: ತಾಲ್ಲೂಕು ಆಸ್ಪತ್ರೆ: | ಅಧ್ಯಕ್ಷರು |
| 2 | ಸಂಬಂಧಪಟ್ಟ ತಜ್ಞವೈದ್ಯರು | ಸದಸ್ಯರು |
| 3 | ಫಿಜಿಶಿಯನ್ | ಸದಸ್ಯರು |

**(ಇ) ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ.**

| | | |
|---|---|---|
| 1 | ಜಿಲ್ಲಾ ಶಸ್ತ್ರಚಿಕಿತ್ಸರು/ವೈದ್ಯಕೀಯ ಅಧೀಕ್ಷಕರು/ ಸಂಸ್ಥೆಯ ಮುಖ್ಯಸ್ಥರು | ಅಧ್ಯಕ್ಷರು |
| 2 | ಸಂಬಂಧಪಟ್ಟ ತಜ್ಞವೈದ್ಯರು | ಸದಸ್ಯರು |
| 3 | ಫಿಜಿಶಿಯನ್ | ಸದಸ್ಯರು |

**(ಈ) ಬೆಂಗಳೂರು ವೈದ್ಯಕೀಯ ಪ್ರಾಧಿಕಾರ.**

ಬೆಂಗಳೂರಿನ ಮುಖ್ಯ ಸಂಸ್ಥೆ/ಆಸ್ಪತ್ರೆಗಳಾದ 1) ವಿಕ್ಟೋರಿಯ, 2) ಕೆ.ಸಿ.ಜನರಲ್ ಆಸ್ಪತ್ರೆ ಮಲ್ಲೇಶ್ವರಂ, 3) ಸಾರ್ವಜನಿಕ ಆಸ್ಪತ್ರೆ, ಜಯನಗರ, 4) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಶಿವಾಜಿನಗರ, 5) ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಬೈರಸಂದ್ರ, ಬೆಂಗಳೂರು, 6) ಇ.ಎಸ್.ಐ ಆಸ್ಪತ್ರೆ ರಾಜಾಜಿನಗರ ಹಾಗೂ ಇಂದಿರಾನಗರ, ಮತ್ತು 7) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳು, ಈ ಕೆಳಗಿನಂತೆ ವೈದ್ಯಕೀಯ ಪ್ರಾಧಿಕಾರವು ಅಂಗವಿಕಲತೆ ಪ್ರಮಾಣ ಪತ್ರಗಳನ್ನು ಧೃಡೀಕರಿಸಿ ವಿತರಿಸುವುದು.

| | | |
|---|---|---|
| 1 | ಅಧೀಕ್ಷಕರು/ಸಂಸ್ಥೆಯ ಮುಖ್ಯಸ್ಥರು | ಅಧ್ಯಕ್ಷರು |
| 2 | ಸಂಬಂಧಪಟ್ಟ ತಜ್ಞವೈದ್ಯರು | ಸದಸ್ಯರು |
| 3 | ಫಿಜಿಶಿಯನ್ | ಸದಸ್ಯರು |

5. ಮೇಲ್ಕಂಡ ವೈದ್ಯಕೀಯ ಪ್ರಾಧಿಕಾರಗಳು ನೀಡಿದ ಪೂರ್ಣ ಅಂಧತ್ವ ಪ್ರಮಾಣಪತ್ರಗಳನ್ನು, ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಗುರುತಿನ ಚೀಟಿಗೆ ಸಹಿ ಮಾಡಿ ವಿತರಿಸುತ್ತಾರೆ.
6. ಒಟ್ಟಾರೆಯಾಗಿ ಅಂಗವಿಕಲರ ಗುರುತಿನ ಚೀಟಿಯಲ್ಲಿ ಅರ್ಜಿದಾರರ ಪೂರ್ಣ ಅಂಧತ್ವವನ್ನು ವೈದ್ಯಕೀಯ ಪ್ರಾಧಿಕಾರ ಧೃಡೀಕರಿಸಿರಬೇಕು ಹಾಗೂ ಸಂಬಂಧಿಸಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯು ಮೊಹರಿನೊಂದಿಗೆ ಸಹಿ ಮಾಡಿ ವಿತರಿಸುವಂತಹ, ಪೂರ್ಣ ಅಂಧ ವ್ಯಕ್ತಿಗಳಿಗೆ ಉಚಿತ ಬಸ್‌ಪಾಸ್‌ಗಳನ್ನು ವಿತರಿಸಬಹುದು.

**II. ಅಂಧ ಪಾಸುದಾರರಿಗೆ ಪ್ರಯಾಣ ಸೌಲಭ್ಯ, ಪಾಸಿನ ಅವಧಿ, ಮುಂಗಡ ಟಿಕೇಟ್ ಕಾಯ್ದಿರಿಸುವಿಕೆಗೆ ಸಂಬಂಧಿಸಿದ ಸೂಚನೆಗಳು:**

1. ಈ ಹಿಂದೆ, ಅಂಧ ಪಾಸುದಾರರು ರಾಜ್ಯಾದ್ಯಂತ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು. ಉಲ್ಲೇಖ-8 ರ ಸರ್ಕಾರದ ಆದೇಶದ ಮೇರೆಗೆ, ಇನ್ನು ಮುಂದೆ, ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ಸಂಸ್ಥೆಗಳು ಕಾರ್ಯಾಚರಣೆಗೊಳಿಸುವ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಸೇವೆಗಳಲ್ಲಿ (ಅಂತರ ರಾಜ್ಯ ಸಾರಿಗೆಗಳು ಸೇರಿದಂತೆ) ಅಂಧ ಪಾಸುದಾರರು ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
2. ಈ ಹಿಂದೆ, ಅಂಧರ ಪಾಸಿನ ಅವಧಿ ಮೂರು ವರ್ಷ ಇದ್ದು, ಉಲ್ಲೇಖ-8ರ ಸರ್ಕಾರದ ಆದೇಶದ ಮೇರೆಗೆ ಇದನ್ನು ಐದು (5) ವರ್ಷಗಳಿಗೆ ಹೆಚ್ಚಿಸಲಾಗಿದೆ. ಇನ್ನು ಮುಂದೆ, ಅಂಧ ಪಾಸುದಾರರಿಗೆ ಐದು (5) ವರ್ಷದ ಅವಧಿಗೆ ಪಾಸುಗಳನ್ನು ವಿತರಿಸುವುದು/ನವೀಕರಿಸುವುದು.
3. ಈ ಹಿಂದೆ, ಅಂಧ ಪಾಸುದಾರರು ನಿಗಮದ ಸಾರಿಗೆಗಳಲ್ಲಿ ನಿಗದಿತ ಶುಲ್ಕವನ್ನು ಪಾವತಿಸಿ ಮುಂಗಡವಾಗಿ ಆಸನ ಕಾಯ್ದಿರಿಸುವ ವ್ಯವಸ್ಥೆ ಇದ್ದು, ಈ ವ್ಯವಸ್ಥೆಯನ್ನು ಉಲ್ಲೇಖ-8 ರ ಸರ್ಕಾರದ ಆದೇಶದ ಮೇರೆಗೆ ಮಾರ್ಪಡಿಸಲಾಗಿದೆ. ಇನ್ನು ಮುಂದೆ, ಅಂಧ ಪಾಸುದಾರರು ಮುಂಗಡ ಕಾಯ್ದಿರಿಸುವಿಕೆ ಸೌಲಭ್ಯ ಹೊಂದಿರುವ ಸಾರಿಗೆಗಳಲ್ಲಿ ಪ್ರಯಾಣಿಸಲು ಯಾವುದೇ ಶುಲ್ಕವಿಲ್ಲದೆ ಉಚಿತವಾಗಿ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
4. ಹಾಲಿ ಅಂಧರ ಪಾಸಿನ ಹಿಂಭಾಗದಲ್ಲಿ ಮುದ್ರಿತವಾಗಿರುವ ನಿಯಮ ನಿಬಂಧನೆಗಳಲ್ಲಿ ಮುಂಗಡ ಆಸನ ಕಾಯ್ದಿರಿಸುವ ಶುಲ್ಕದ ಕಲಂನ್ನು ಪಾಸ್‌ಗಳನ್ನು ಮುದ್ರಿಸುವ ಸಮಯದಲ್ಲಿ ತೆಗೆದು ಹಾಕಲು ಕ್ರಮ ಕೈಗೊಳ್ಳುವುದು.

**III. ಅಂಧ ಪ್ರಯಾಣಿಕರಿಗೆ ಆಸನಗಳ ಮೀಸಲಾತಿ ವ್ಯವಸ್ಥೆ :**

1. ಅಂಧರಿಗೆ ನಿಗಮದ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ತಲಾ 02 ಆಸನಗಳನ್ನು ಮೀಸಲಿರಿಸಲಾಗಿದೆ. ವಾಹನಗಳ ಪ್ರವೇಶದ್ವಾರವು ಮುಂದುಗಡೆ ಇದ್ದಲ್ಲಿ, ವಾಹನವನ್ನು ಹತ್ತಿದ ಕೂಡಲೇ ಬಲಗಡೆ ಇರುವ ಎರಡು ಆಸನಗಳನ್ನು ಹಾಗೂ ಪ್ರವೇಶದ್ವಾರವು ಹಿಂದುಗಡೆ ಇದ್ದಲ್ಲಿ, ವಾಹನ ಹತ್ತಿದ ಕೂಡಲೇ ಎಡಗಡೆ ಇರುವ ಎರಡು ಆಸನಗಳನ್ನು ಅಂಧರಿಗಾಗಿ ಮೀಸಲಿಡುವುದು.

2. ಮೇಲ್ಕಂಡ ಆಸನ ಮೀಸಲಾತಿಯು ಮುಂಗಡ ಕಾಯ್ದಿರಿಸುವಿಕೆ ಸೌಲಭ್ಯ ಹೊಂದಿರುವ ಸಾರಿಗೆಗಳಿಗೆ ಅನ್ವಯಿಸುವುದಿಲ್ಲ.
3. ಬಸ್ಸಿನಲ್ಲಿ ಅಂಧರು ಇಲ್ಲದ ಸಂದರ್ಭದಲ್ಲಿ ಮಾತ್ರ ಸದರಿ ಆಸನಗಳನ್ನು ಇತರೆ ಪ್ರಯಾಣಿಕರು ಉಪಯೋಗಿಸಬಹುದಾಗಿದೆ. ಅಂಧರು ಬಸ್ಸನ್ನು ಹತ್ತಿದಾಗ, ಇತರೆ ಪ್ರಯಾಣಿಕರು ಸದರಿ ಆಸನಗಳನ್ನು ತೆರವುಗೊಳಿಸಬೇಕಿರುತ್ತದೆ. ಕರ್ತವ್ಯನಿರತ ನಿರ್ವಾಹಕರು, ಚಾಲಕರು ಹಾಗೂ ಚಾಲಕ–ಕಂ–ನಿರ್ವಾಹಕರು ಅಂಧರಿಗೆ ಮೀಸಲಿರಿಸಿದ ಆಸನಗಳನ್ನು ಅವರಿಗೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
4. ಅಂಧರಿಗೆ ಮೀಸಲಿರಿಸಿರುವ ಆಸನಗಳನ್ನು ತೆರವುಗೊಳಿಸಲು ನಿರಾಕರಿಸಿದ ಪ್ರಯಾಣಿಕರ ವಿರುದ್ಧ ಕರ್ತವ್ಯನಿರತ ಚಾಲನಾ ಸಿಬ್ಬಂದಿಯು ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಬಹುದು.
5. ಬಸ್ಸಿನಲ್ಲಿ ಮೀಸಲಿರಿಸುವ ಆಸನಗಳ ಬಳಿ **"ಅಂಧರಿಗಾಗಿ"** ಎಂದು ದಪ್ಪ ಅಕ್ಷರಗಳಲ್ಲಿ ಬರೆಯಿಸಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸುವುದು.

## IV. ಅಂಧರ ಉಚಿತ ಪಾಸು ವಿತರಣೆಯಲ್ಲಿ ಅನುಸರಿಸಬೇಕಾದ ಕ್ರಮಗಳು

1. ಪಾಸು ಪಡೆಯಲಿಚ್ಛಿಸುವ ಅಂಧರು ನಿಗದಿತ ನಮೂನೆಯಲ್ಲಿ ತಮ್ಮ ವಿವರಗಳನ್ನು ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿರುತ್ತದೆ, ನಮೂನೆಯನ್ನು **ಅನುಬಂಧ "ಅ"** ನಲ್ಲಿ ಲಗತ್ತಿಸಿದೆ.
2. ಅರ್ಜಿಯೊಂದಿಗೆ ಮೂರು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳನ್ನು ಸಲ್ಲಿಸಬೇಕು. ಒಂದು ಭಾವಚಿತ್ರವನ್ನು ಅರ್ಜಿಗೂ, ಎರಡನೇಯ ಭಾವಚಿತ್ರವನ್ನು ಪಾಸಿನಲ್ಲಿ ಹಾಗೂ ಮತ್ತೊಂದನ್ನು ಪಾಸುದಾರರ ವಿವರಗಳಿರುವ ದಾಖಲಾತಿಯಲ್ಲಿ ಅಂಟಿಸುವುದು.
3. ಅರ್ಜಿಯ ಜೊತೆಗೆ ನಿಗದಿಪಡಿಸಿದ ವೈದ್ಯಕೀಯ ಪ್ರಾಧಿಕಾರಗಳಿಂದ ಮತ್ತು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯ ಸಹಿಯೊಂದಿಗೆ ಪಡೆದ ಪ್ರಮಾಣಪತ್ರವನ್ನು ಹಾಗೂ ಗುರುತಿನ ಚೀಟಿಯನ್ನು ಸಲ್ಲಿಸುವುದು.
4. ಅರ್ಜಿದಾರರು ಅಂಧರ ಬಸ್‌ಪಾಸ್ ಪಡೆಯಲು ಅರ್ಹರಲ್ಲ ಎಂಬ ಬಗ್ಗೆ ಅನುಮಾನ/ಸಂಶಯ ಬಂದಲ್ಲಿ, ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪರಿಶೀಲನೆಗಾಗಿ ಕಳುಹಿಸುವುದು. ಸದರಿ ಇಲಾಖೆಯಿಂದ ಪಾಸನ್ನು ವಿತರಿಸಬಹುದು ಎಂಬ ಹಿಂಬರಹ ಬಂದ ನಂತರ ಉಚಿತ ಬಸ್‌ಪಾಸ್ ವಿತರಿಸಲು ಕ್ರಮ ಕೈಗೊಳ್ಳುವುದು.
5. ಅಂಧರ ಪಾಸ್ ವಿತರಣೆಗೆ ಯಾವುದೇ ಶುಲ್ಕವನ್ನು ಪಡೆಯುವಂತಿಲ್ಲ. ಈ ಹಿಂದೆ ರೂ.2/– ಶುಲ್ಕ ವಿಧಿಸುವಂತೆ ನೀಡಿರುವ ಆದೇಶವನ್ನು ಹಿಂಪಡೆಯಲಾಗಿದೆ.
6. ಅಂಧ ಪಾಸುದಾರರು ಬಸ್ಸುಗಳಲ್ಲಿ ಪ್ರಯಾಣಿಸುವಾಗ, ಸಾಮಾನ್ಯ ಪ್ರಯಾಣಿಕರು ಬಸ್ಸಿನಲ್ಲಿ ಲಗೇಜು ಕೊಂಡೊಯ್ಯಲು ಅವಕಾಶವಿರುವ ನಿಯಮಾವಳಿಗಳನ್ವಯ ಲಗೇಜನ್ನು ಉಚಿತವಾಗಿ ಕೊಂಡೊಯ್ಯಲು ಅವಕಾಶವಿರುತ್ತದೆ. ಹೆಚ್ಚಿನ ಲಗೇಜಿಗೆ ನಿಯಮಾವಳಿಗಳನ್ವಯ ಲಗೇಜು ಶುಲ್ಕ ನೀಡಬೇಕಿರುತ್ತದೆ.

Edited by Foxit Reader
Copyright(C) by Foxit Software Company,2005-2007
For Evaluation Only.

7. ಅಂಧ ಪಾಸುದಾರರೊಂದಿಗೆ ಚಾಲನಾ ಸಿಬ್ಬಂದಿಯು ಅತ್ಯಂತ ಸೌಜನ್ಯದಿಂದ ವರ್ತಿಸುವುದು ಹಾಗೂ ನಿಗಮದ ಬಸ್ಸುಗಳಲ್ಲಿ ಅಂಧರು ಪ್ರಯಾಣಿಸಲು ಬಂದಾಗ ನಿರ್ವಾಹಕರು ಪಾಸಿನ ಚಾಲ್ತಿ ಅವಧಿ ಹಾಗೂ ಪಾಸಿನ ವಿತರಣಾಧಿಕಾರಿಯ ಸಹಿ ಮತ್ತು ಮೊಹರಿನ ನೈಜತೆಯನ್ನು ಪರಿಶೀಲಿಸುವುದು. ಸದರಿ ಪಾಸಿನ ಸಂಖ್ಯೆ, ಪ್ರಯಾಣದ ಮಾರ್ಗವನ್ನು ಇಟಿಎಂ ಹಾಗೂ ವೇ–ಬಿಲ್‌ನಲ್ಲಿ ದಾಖಲಿಸುವುದು.
8. ಸರ್ಕಾರಿ/ಅರೆ ಸರ್ಕಾರಿ ಉದ್ಯೋಗದಲ್ಲಿರುವ ಅಂಧರು ಹಾಗೂ ಸಾರಿಗೆ ಭತ್ಯೆ ಪಡೆಯುತ್ತಿರುವ ಅಂಧರು ಉಚಿತ ಬಸ್ ಪಾಸ್ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
9. ಅಂಧರ ಉಚಿತ ಬಸ್‌ಪಾಸ್‌ನ್ನು ವಿಭಾಗ ಮಟ್ಟದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿ ಅಥವಾ ವಿಭಾಗೀಯ ಸಂಚಾರ ಅಧಿಕಾರಿ ಸಹಿ ಮಾಡಿ ವಿತರಿಸಬೇಕು.
10. ಅಂಧರ ಪಾಸನ್ನು ನವೀಕರಿಸುವಾಗ ಹಳೆಯ ಪಾಸನ್ನು ಸ್ವಾಧೀನಕ್ಕೆ ಪಡೆದು, ದಾಖಲಾತಿಗಳನ್ನು ನಿರ್ವಹಿಸಬೇಕು.
11. ಅನುಪಯುಕ್ತ ಪಾಸುಗಳನ್ನು ನಾಶಪಡಿಸುವುದಕ್ಕೆ ಅನುಸರಿಸುವ ನೀತಿ ನಿಯಮಾವಳಿಗಳಂತೆ, ಒಂದು ವರ್ಷದ ನಂತರ ಹಳೆಯ ಪಾಸುಗಳನ್ನು ನಾಶಪಡಿಸಲು ಕ್ರಮ ಕೈಗೊಳ್ಳುವುದು.

## V. ಅಂಧ ಪಾಸುದಾರರು ಪ್ರಯಾಣಿಸುವಾಗ ಅನುಸರಿಸಬೇಕಾದ ಕ್ರಮಗಳು :

1. ಪಾಸುದಾರರು ಪ್ರಯಾಣದ ಅವಧಿಯಲ್ಲಿ ನಿಗಮವು ವಿತರಿಸುವ ಉಚಿತ ಪಾಸನ್ನು ತಮ್ಮೊಂದಿಗೆ ಇಟ್ಟುಕೊಳ್ಳುವುದು. ಬಸ್ಸಿನ ನಿರ್ವಾಹಕರು ಹಾಗೂ ನಿಗಮದ ಅಧಿಕಾರಿಗಳು ಕೇಳಿದಾಗ ಪಾಸನ್ನು ತೋರಿಸುವುದು ಕಡ್ಡಾಯವಿರುತ್ತದೆ.
2. ಪಾಸಿನ ಚಾಲ್ತಿ ಅವಧಿ ಮುಗಿಯುವುದರೊಳಗೆ ನವೀಕರಣ ಮಾಡಿಸಿಕೊಳ್ಳುವುದು.
3. ಪಾಸಿನ ದುರುಪಯೋಗ ಅಂದರೆ ಒಂದಕ್ಕಿಂತ ಹೆಚ್ಚು ಪಾಸುಗಳು, ಪಾಸಿನಲ್ಲಿ ತಿದ್ದಿರುವುದು/ಬದಲಾವಣೆ ಮಾಡಿಕೊಂಡಿರುವುದು, ಕಂಡು ಬಂದಲ್ಲಿ, ಪಾಸನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಪಾಸನ್ನು ನಿಗದಿತ ದಿನಾಂಕದೊಳಗೆ ನವೀಕರಣ ಮಾಡಿಕೊಳ್ಳದಿದ್ದಲ್ಲಿ, ಪಾಸು ಪಡೆದ ಕಛೇರಿಗೆ ಹಿಂದಿರುಗಿಸುವುದು.
5. ಅಂಧ ಪಾಸುದಾರರು ಮುಂಗಡವಾಗಿ ಆಸನ ಭರ್ತಿಯಾಗಿರುವ ಸಾರಿಗೆಗಳಲ್ಲಿ ಹಾಗೂ ಬಸ್ಸಿಗಾಗಿ ಕಾಯುತ್ತಿರುವ ಇತರೆ ಪ್ರಯಾಣಿಕರ ಮೇಲೆ ಯಾವುದೇ ರೀತಿಯ ಹಕ್ಕು ಹೊಂದಿರುವುದಿಲ್ಲ.
6. ಪಾಸನ್ನು ವರ್ಗಾಯಿಸುವಂತಿಲ್ಲ.
7. ಬಸ್ ನಿಲ್ದಾಣಗಳಲ್ಲಿ ಹಾಗೂ ಬಸ್ಸಿನಲ್ಲಿ ಭಿಕ್ಷಾಟನೆ ಹಾಗೂ ಇನ್ನಿತರೆ ವ್ಯವಹಾರಗಳನ್ನು ನಿಷೇಧಿಸಲಾಗಿದೆ. ಅಂಧ ಪಾಸುದಾರರು ಬಸ್ಸಿನೊಳಗೆ ಅಥವಾ ಬಸ್ ನಿಲ್ದಾಣದಲ್ಲಿ ಭಿಕ್ಷಾಟನೆ ಮುಂತಾದ ವ್ಯವಹಾರಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಅವರ ಪಾಸನ್ನು

ವಶಪಡಿಸಿಕೊಳ್ಳಲಾಗುವುದು ಹಾಗೂ ಮುಂದೆ ಅವರಿಗೆ ನಿಗಮದಿಂದ ಉಚಿತ ಬಸ್ ಪಾಸನ್ನು ವಿತರಿಸಲಾಗುವುದಿಲ್ಲ.

8. ಅಂಧರ ಬಸ್ ಪಾಸ್ ಕಳೆದುಕೊಂಡಲ್ಲಿ, ಪೊಲೀಸ್ ಠಾಣೆಗೆ ದೂರು ದಾಖಲಿಸಿ, ಸ್ವೀಕೃತಿ ಪ್ರತಿ, ಹಾಗೂ ಇತರ ಅಗತ್ಯ ದಾಖಲಾತಿಗಳೊಂದಿಗೆ ರೂ. 100/- (ರೂಪಾಯಿ ನೂರು ಮಾತ್ರ) ದಂಡ ಶುಲ್ಕವಾಗಿ ಪಾವತಿಸಿಕೊಂಡು ನಕಲು ಪಾಸನ್ನು ವಿತರಿಸುವುದು. ಪಾಸ್ ಕಳೆದುಕೊಂಡಿರುವುದಕ್ಕೆ ವಿಭಾಗದಿಂದ ಸುತ್ತೋಲೆಯನ್ನು ಹೊರಡಿಸಿ ನಂತರ ನಕಲು ಪಾಸ್ ವಿತರಿಸುವುದು.
9. ಅಂಧರ ಉಚಿತ ಬಸ್‌ಪಾಸನ್ನು ನಾಲ್ಕು ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ಪ್ರಯಾಣಿಸಲು ಅನುಮತಿಸಲಾಗಿದೆ.

ಈ ಸಾಮಾನ್ಯ ಸ್ಥಾಯಿ ಆದೇಶವು ಈ ಕೂಡಲೇ ಜಾರಿಗೆ ಬರುತ್ತದೆ. ಉಲ್ಲೇಖ-1 ರಿಂದ 7 ರವರೆಗಿನ ಎಲ್ಲಾ ಆದೇಶಗಳನ್ನು ರದ್ದುಗೊಳಿಸಲಾಗಿದೆ.

ಈ ಆದೇಶ ತಲುಪಿದ್ದಕ್ಕೆ ಸ್ವೀಕೃತಿಯನ್ನು ಹಾಗೂ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿಯನ್ನು ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

✓ಪ್ರತಿಯನ್ನು:

1) ವ್ಯವಸ್ಥಾಪಕ ನಿರ್ದೇಶಕರು ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಗುಲ್ಬರ್ಗಾ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಗುಲ್ಬರ್ಗಾ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ,ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಮುದ್ರಣ ನಿಯಂತ್ರಣಾಧಿಕಾರಿಗಳು, ಕ.ರಾ.ಸಾ. ಮುದ್ರಣಾಲಯ, ಬೆಂಗಳೂರು, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
6) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
7) ನಿರ್ದೇಶಕರು(ಭ ಮತ್ತು ಜಾ) / (ಸಿ ಮತ್ತು ಪ)ರವರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಅನುಬಂಧ–ಅ

ಗೆ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ/ಸಂಸ್ಥೆ
.......................................... ವಿಭಾಗ

| |
|---|
| ಇತ್ತೀಚಿನ ಭಾವಚಿತ್ರ |

ಮಾನ್ಯರೇ,

**ವಿಷಯ** :ಅಂಧರ ಉಚಿತ ಬಸ್ ಪಾಸ್ ವಿತರಣೆಗೆ ಕೋರಿ.

****

ಕ.ರಾ.ರ.ಸಾ.ನಿಗಮದ ನಿಯಮಾವಳಿಗಳನ್ವಯ ಅಂಧರ ಉಚಿತ ಬಸ್ ಪಾಸ್ ಪಡೆಯಲು ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

1. ಹೆಸರು (ದೊಡ್ಡ ಅಕ್ಷರಗಳಲ್ಲಿ) :..................................................
2. ಹುಟ್ಟಿದ ದಿನಾಂಕ ಮತ್ತು ವಯಸ್ಸು :.......................................................................
3. ಲಿಂಗ: ಪುರುಷ/ಮಹಿಳೆ.....................................................................
4. ಆಧಾರ್ ಸಂಖ್ಯೆ ..................................................
5. ವರ್ಗ: ಸಾಮಾನ್ಯ/ಇತರೆ(ಓ.ಬಿ.ಸಿ)/ಎಸ್‌ಸಿ/ಎಸ್‌ಟಿ. ................ ................
6. ವಿಳಾಸ : .........................................................................................................

   ........................................................................................................
7. ಪಾಸ್ ಬೇಕಿರುವ ಅವಧಿ : .....................................................................................
8. ವೃತ್ತಿ / ಉದ್ಯೋಗ ಮಾಡುವ ವಿಳಾಸ: ...................................................................
9. ನಾನು ಸರ್ಕಾರಿ/ಅರೆಸರ್ಕಾರಿ ಸಂಸ್ಥೆಯ ಉದ್ಯೋಗಿಯಾಗಿರುತ್ತೇನೆ/ಉದ್ಯೋಗಿಯಾಗಿರುವುದಿಲ್ಲ.
10. ಸರ್ಕಾರ/ಇತರೆ ಸಂಸ್ಥೆಗಳಿಂದ ಸಾರಿಗೆ ಭತ್ಯೆಯನ್ನು ಪಡೆಯುತ್ತಿದ್ದೇನೆ/ಪಡೆಯುತ್ತಿಲ್ಲ.
11. ನಿಗದಿಪಡಿಸಿದ ವೈದ್ಯಕೀಯ ಪ್ರಾಧಿಕಾರಗಳಿಂದ ಗುರುತಿಸಿದ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯ ಸಹಿ ಹಾಗೂ ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರವನ್ನು ಗುರುತಿನ ಚೀಟಿ ಸಂಖ್ಯೆ ................................................................................... ರ ಪ್ರತಿಯನ್ನು ಲಗತ್ತಿಸಿದೆ.

ಅರ್ಜಿದಾರರ ಹೆಬ್ಬೆಟ್ಟು/ಸಹಿ

ಸ್ಥಳ :

ದಿನಾಂಕ :



Traffic Chandu

Edited by Foxit Reader
Copyright(C) by Foxit Software Company,2005-2007
For Evaluation Only.

ಸಂ (ವಾ)–1567

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

**ಅಂಧರ ಉಚಿತ ಪ್ರಯಾಣದ ಬಸ್‌ಪಾಸ್**

(ಸಂಸ್ಥೆಯ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಮಾತ್ರ ಪ್ರಯಾಣಿಸಲು)

ಉಚಿತ ಪಾಸ್ ಸಂಖ್ಯೆ: ____________

ಹೆಸರು: ____________

ವಿಳಾಸ: ____________

____________

ಮಾನ್ಯತಾ ಅವಧಿ: ________ ರಿಂದ ________ ರವರೆಗೆ

ಪಾಸ್ ಪಡೆಯುವವರ ಸಹಿ
ಅಥವಾ ಹೆಬ್ಬೆಟ್ಟಿನ ಗುರುತು:

ಪಾಸ್ ವಿತರಣಾಧಿಕಾರಿಗಳ ಸಹಿ
ಮತ್ತು ಮೊಹರು

**<u>ನಿಯಮ ಮತ್ತು ನಿಬಂಧನೆಗಳು</u>**

1. ಈ ಪಾಸನ್ನು ಹೊಂದಿರುವವರು ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಮಾತ್ರ ಪ್ರಯಾಣಿಸಬಹುದಾಗಿದೆ.
2. ಕರ್ನಾಟಕ ರಾಜ್ಯ ಹಾಗೂ ಅಂತರ ರಾಜ್ಯದಲ್ಲಿ ಎಲ್ಲಿಂದ ಎಲ್ಲಿಗಾದರೂ ಪ್ರಯಾಣಿಸಲು ಅನುಮತಿ ನೀಡಲಾಗಿದೆ.
3. ಈ ಪಾಸನ್ನು ಹೊಂದಿರುವವರು ಕರಾರಸಾನಿಗಮ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ಹಾಗೂ ಬೆಂಮಸಾಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಬಹುದಾಗಿದೆ.
4. ಮುಂಗಡ ಕಾಯ್ದಿರಿಸುವ ಶುಲ್ಕವನ್ನು ಪಾವತಿಸದೆ ಆಸನಗಳನ್ನು ಕಾಯ್ದಿರಿಸಬಹುದಾಗಿದೆ.
5. ಈ ಪಾಸನ್ನು ವರ್ಗಾವಣೆ ಮಾಡುವಂತಿಲ್ಲ.
6. ಸಂಸ್ಥೆಯ ತನಿಖಾಧಿಕಾರಿಗಳು, ಅಧಿಕಾರಿಗಳು, ಮಾರ್ಗದ ನಿರ್ವಾಹಕರು/ಚಾಲಕರು ಕೇಳಿದಾಗ ಪಾಸನ್ನು ತೋರಿಸುವುದು.
7. ಪ್ರತಿ ಐದು ವರ್ಷಗಳಿಗೊಮ್ಮೆ ಪಾಸನ್ನು ಸಂಬಂಧಪಟ್ಟ ವಿಭಾಗಗಳಲ್ಲಿ ನವೀಕರಿಸಬೇಕು.
8. ಈ ಪಾಸು ದುರುಪಯೋಗವಾದಲ್ಲಿ ಸದರಿ ಪಾಸನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು.

ಟ್ರಾಫಿಕ್–ವಾಣಿಜ್ಯ